
**ಟಾಪ್ ನ್ಯೂಸ್**

ಗಂಗಾವತಿ ತಾಲೂಕಿನ ಆನೆಗೊಂದಿಯ ಐತಿಹಾಸಿಕ ಪ್ರಸಿದ್ಧ ನವವೃಂದಾವನ ಗಡ್ಡಿಯಲ್ಲಿ ಸೋಸಲೆ ಶ್ರೀ ವ್ಯಾಸರಾಜ ಮಠದಿಂದ ಶ್ರೀ ವ್ಯಾಸರಾಜ ಗುರುಸಾರ್ವಭೌಮರ 487ನೇ ಆರಾಧನಾ ಮಹೋತ್ಸವ ನಿಮಿತ್ತ ಪೂರ್ವಾರಾಧನೆಗೆ ಶ್ರೀ ವಿದ್ಯಾಶ್ರೀಶ ತೀರ್ಥರ ಸಾನ್ನಿಧ್ಯದಲ್ಲಿ ಶುಕ್ರವಾರ ಚಾಲನೆ ದೊರೆಯಿತು.



## ಕರಂಜಿ ಬಿಜೆಪಿ ಸೇರ್ಪಡೆ...

ಬೀದರ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾಜಿ ಸೈನಿಕ ಅಶೋಕಕುಮಾರ ಕರಂಜಿ ಬಿಜೆಪಿಗೆ ಸೇರ್ಪಡೆಗೊಂಡರು. ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್, ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್, ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ, ಪ್ರಭು ಚವ್ಹಾಣ್, ಕೇಂದ್ರದ ಮಾಜಿ ಸಂಸದ ಭಗವಂತ ಖೂಬಾ, ಮಾಜಿ ಶಾಸಕ ಪ್ರಕಾಶ ಖಂಡ್ರೆ ಇತರರಿದ್ದರು.

## ಸುದ್ದಿ ಕಾರ್ನರ್

### ನಿರ್ಗತಿಕರಿಗೆ ವಾತ್ಸಲ್ಯ ಮನೆ

- ಮುರಳಿಧರ ಹೇಳಿಕೆ
- ಖಾನಾಪುರದಲ್ಲಿ ಕಾರ್ಯಕ್ರಮ

**ಔರಾದ್:** ಸೂರಿಲ್ಲದ, ನಿರ್ಗತಿಕ, ವಯಸ್ಸಾದ ಮಹಿಳೆಯರಿಗೆ ನೆರವಾಗುವ ಉದ್ದೇಶದಿಂದ ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ವಾತ್ಸಲ್ಯ ಮನೆ ಕಟ್ಟಿ ಕೊಡಲಾಗುತ್ತಿದೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಮುರಳಿಧರ್ ಎಚ್. ಎಲ್. ಹೇಳಿದರು. ಮಂಗಳವಾರ ತಾಲೂಕಿನ ಖಾನಾಪುರ ಗ್ರಾಮದಲ್ಲಿ ನಿರ್ಗತಿಕ ಮಹಿಳೆ ಬಿಜನ್‌ಬಿ ಅವರಿಗೆ ವಾತ್ಸಲ್ಯ ಮನೆಯನ್ನು ಹಸ್ತಾಂತರಿಸಿ ಮಾತನಾಡಿದ ಅವರು, ಧರ್ಮಸ್ಥಳದ ಹೇಮಾವತಿ ಹೆಗ್ಗಡೆ ಹಾಗೂ ಅವರ ಪುತ್ರಿ ಶ್ರದ್ಧಾ ಅವರು ಈ ಯೋಜನೆಯನ್ನು ರಾಜ್ಯಾದ್ಯಂತ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ.

ವಾತ್ಸಲ್ಯ ಮನೆ ಕಟ್ಟಿಕೊಡುವಂಥ ಪುಣ್ಯದ ಕೆಲಸಕ್ಕೆ 11.45 ಕೋಟಿ ರೂ. ವಿನಿಯೋಗಿಸಲಾಗಿದೆ ಎಂದು ತಿಳಿಸಿದರು. ಕೆರೆ ಹೂಳೆತ್ತುವುದಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಆದ್ಯತೆ ನೀಡಿದ್ದು, ಜಿಲ್ಲೆಯಲ್ಲಿ ನಾನಾ ಕೆರೆಗಳನ್ನು ಅಭಿವೃದ್ಧಿಪಡಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಕೆರೆ ಹೂಳೆತ್ತುವುದರಿಂದ ಅಲ್ಲಿ ಸಿಗುವ ಮಣ್ಣು ತೆಗೆದುಕೊಂಡು ರೈತರು ತಮ್ಮ ಹೊಲ ಹಾಗೂ ತೋಟಗಳಿಗೆ ಬಳಸಿಕೊಂಡು ಉತ್ತಮ ಬೆಳೆ ಬೆಳೆಯಬಹುದು ಎಂದು ಹೇಳಿದರು. ತಾಲೂಕು ಯೋಜನಾಧಿಕಾರಿ ರಾಘವೇಂದ್ರ ಗೌಡ ಮಾತನಾಡಿ, ವಾತ್ಸಲ್ಯ ಮನೆ ನಿರ್ಮಿಸಿ ಕೊಡುವ ಜತೆಗೆ ವಾತ್ಸಲ್ಯ ಕಿಟ್ ಅಡಿ ಪೌಷ್ಟಿಕವಾದ ಆಹಾರ ಪದಾರ್ಥಗಳನ್ನು ಹಾಗೂ ಪ್ರತಿ ತಿಂಗಳು ಮಾಸಾಶನ ಕೊಟ್ಟು ನಿರ್ಗತಿಕ ಮಹಿಳೆಯರು ಚಿಂತೆ ಇಲ್ಲದೆ ಜೀವನ ನಡೆಸಲು ಸಹಾಯ ಮಾಡಲಾಗುತ್ತಿದೆ. ಗ್ರಾಮಸ್ಥರು ಇಂತಹವರನ್ನು ಪ್ರೀತಿಯಿಂದ ನೋಡಬೇಕು. ಅವರಲ್ಲಿ ಅನಾಥರು ಎನ್ನುವ ಭಾವನೆ ಬರದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು. ಪ್ರಮುಖರಾದ ಅಶೋಕ ಶೆಂಬೆಳ್ಳಿ, ರಮೇಶ ಪಾಟೀಲ್, ಮಲ್ಲಿಕಾರ್ಜುನ ಪಾಟೀಲ, ಸುಂದರ್ ಇತರರಿದ್ದರು.



ಔರಾದ್ ತಾಲೂಕಿನ ಖಾನಾಪುರದಲ್ಲಿ ನಿರ್ಗತಿಕ ಮಹಿಳೆ ಬಿಜನ್‌ಬಿ ಅವರಿಗೆ ವಾಸ್ತಲ್ಯ ಮನೆ ಹಸ್ತಾಂತರ ಮಾಡಲಾಯಿತು. ಮುರಳಿಧರ ಎಚ್.ಎಲ್., ರಾಘವೇಂದ್ರ ಗೌಡ, ಅಶೋಕ ಶೆಂಬೆಳ್ಳಿ, ರಮೇಶ ಪಾಟೀಲ್, ಮಲ್ಲಿಕಾರ್ಜುನ ಪಾಟೀಲ್ ಇದ್ದರು.

### ಬೀದರ್ ಜಿಲ್ಲೆಗೆ ಸಿಹಿಗಿಂತ ಕಹಿ ಜಾಸ್ತಿ ಕೊಟ್ಟ ಸಿದ್ದರಾಮಯ್ಯ ಬಜೆಟ್ | ಕೇಳಿದ್ದೊಂದು, ಸಿಕ್ಕಿದ್ದು ಇನ್ನೊಂದು

# ನಿರೀಕ್ಷೆ ಅಪಾರ ದಕ್ಕಿರುವುದು ಅಲ್ಪ

■ ರೇವಣಸಿದ್ದಪ್ಪ ಪಾಟೀಲ್ ಬೀದರ್

ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಮಂಡಿಸಿದ ಬಜೆಟ್ ಗಡಿ ಜಿಲ್ಲೆ ಬೀದರ್ ಪಾಲಿಗೆ ಸಿಹಿಗಿಂತ ಕಹಿಯೇ ಜಾಸ್ತಿ ಎನ್ನುವಂತಿದೆ. ಬಸವಕಲ್ಯಾಣದಲ್ಲಿ ಖಾಸಗಿ ವಚನ ವಿಶ್ವವಿದ್ಯಾಲಯ ಸ್ಥಾಪನೆಗೆ 25 ಎಕರೆ ಜಮೀನು, ನೂತನ ಅನುಭವ ಮಂಟಪ ಪ್ರಸಕ್ತ ವರ್ಷ ಲೋಕಾರ್ಪಣೆ ಹೊರತುಪಡಿಸಿ ಯಾವುದೇ ಹೇಳಿಕೊಳ್ಳುವಂಥ ಹೊಸ ಯೋಜನೆಗಳು ಸಿಕ್ಕಿಲ್ಲ. ನಿರೀಕ್ಷೆ ಅಪಾರವಿದ್ದರೂ ಸಿಕ್ಕಿದ್ದು ಮಾತ್ರ ಅಲ್ಪ ಎನ್ನುವಂತಾಗಿದೆ.

ರಾಜ್ಯ ಸಚಿವ ಸಂಪುಟದಲ್ಲಿರುವ ಜಿಲ್ಲೆಯ ಈಶ್ವರ ಖಂಡ್ರೆ, ರಹೀಮ್ ಖಾನ್ ಪ್ರಯತ್ನದಿಂದ ದೊಡ್ಡ ಕೊಡುಗೆ ದಕ್ಕುವ ಆಶಾಭಾವ ಮೂಡಿತ್ತು. ಆದರೆ ಅಂದುಕೊಂಡಂತೆ ಆಗಿಲ್ಲ. ಬೆರಳೆಣಿಕೆಯಷ್ಟು ಯೋಜನೆಗಳು ಜಿಲ್ಲೆಗೆ ಬಂದಿದ್ದು ನಿರಾಸೆ ಮೂಡಿಸಿದೆ. ಜಿಲ್ಲೆಗೆ ಹೊಸದನ್ನು ತರುವ ವಿಷಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಮೇಲೆ ಹೆಚ್ಚಿನ ಜವಾಬ್ದಾರಿ ಇರುತ್ತದೆ. ಸಾಕಷ್ಟು ವ್ಯವಸ್ಥಿತ ಪ್ರಯತ್ನದ ಮೂಲಕ ಯೋಜನೆಗಳನ್ನು ಬಜೆಟ್‌ನಲ್ಲಿ ಸೇರಿಸಬೇಕಾಗುತ್ತದೆ. ಆದರೆ ಈ ಬಜೆಟ್ ಅವಲೋಕಿಸಿದರೆ ಪಕ್ಷದ ಸ್ಥಳೀಯ ಪ್ರಮುಖರು, ಚುನಾಯಿತ ಪ್ರತಿನಿಧಿಗಳು ಹೊಸದು ತರುವಲ್ಲಿ ಎಡವಿದಂತೆ ಕಾಣುತ್ತದೆ.

ಬಸವಕಲ್ಯಾಣದಲ್ಲಿ ನಿರ್ಮಿಸುತ್ತಿರುವ ಅನುಭವ ಮಂಟಪ ಕಾಮಗಾರಿ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದು, ಪ್ರಸಕ್ತ ವರ್ಷವೇ ಪೂರ್ಣಗೊಳಿಸಲಾಗುವುದು ಎಂದಷ್ಟೇ ಹೇಳಲಾಗಿದೆ. ಆದರೆ ಅನುದಾನ ಒದಗಿಸಿಲ್ಲ. ಅಲ್ಲದೆ ವಚನ ವಿವಿಗೆ 25 ಎಕರೆ ಜಮೀನು ಒದಗಿಸುವುದಾಗಿ ಘೋಷಿಸಲಾಗಿದೆ. ಈಗಾಗಲೇ ಬೀದರ್‌ನಲ್ಲಿ 1000 ಬಂದಿಗಳ ಸಾಮರ್ಥ್ಯದ ಜಿಲ್ಲಾ ಕೇಂದ್ರ ಕಾರಾಗೃಹ ನಿರ್ಮಾಣ ಮಾಡಲಾಗುತ್ತಿದೆ. ಮತ್ತೆ ಬಜೆಟ್‌ನಲ್ಲಿ ಈ ವಿಷಯ ಸೇರಿಸಲಾಗಿದೆ.

ಬಜೆಟ್ ಗಾತ್ರ 4.48 ಲಕ್ಷ ರೂ. ಕೋಟಿಗೇರಿದೆ. ಆದರೆ ಜಿಲ್ಲೆಗೆ ನಿರೀಕ್ಷಿತ ಲಾಭ ಸಿಕ್ಕಿಲ್ಲ. ಕೃಷಿ ಕಾಲೇಜು ಮಂಜೂರು, ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ (ಬಿಎಸ್ಸೆಸ್ಕೆ) ಪುನಶ್ಚೇತನಕ್ಕೆ ಆರ್ಥಿಕ ಸಹಾಯ, ಕಾರಂಜಾ ಯೋಜನೆಯಡಿ ಭೂಮಿ ಕಳೆದುಕೊಂಡ ಸಂತ್ರಸ್ತರಿಗೆ ಪರಿಹಾರ, ಗೋದಾವರಿ ಜಲಾನಯನದ ಮಾಂಜ್ರಾ ನದಿ ನೀರಿನ ಸದ್ಬಳಕೆ ಸೇರಿ ಜಿಲ್ಲೆ ಅಭಿವೃದ್ಧಿಗೆ ಮಹತ್ವಾಕಾಂಕ್ಷಿ ಯೋಜನೆಗಳು ಘೋಷಣೆ ಆಗದಿರುವುದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ.



ಬಸವಕಲ್ಯಾಣದಲ್ಲಿ ಪ್ರಗತಿಯಲ್ಲಿರುವ ಅನುಭವ ಮಂಟಪ ಕಾಮಗಾರಿ.

## ರಾಜ್ಯದ ಆರ್ಥಿಕ ದುರಂತದ ಬಜೆಟ್



ಸಿಎಂ ಸಿದ್ದರಾಮಯ್ಯ ಮಂಡಿಸಿದ್ದು ರಾಜ್ಯವನ್ನು ಆರ್ಥಿಕ ದುರಂತಕ್ಕೆ ತಳ್ಳುವಂತಹ ಬಜೆಟ್ ಆಗಿದೆ ಎಂದು ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ದೂರಿದ್ದಾರೆ. ಕಳೆದ ಮೂರು ವರ್ಷದಲ್ಲಿ 4.39 ಲಕ್ಷ ಕೋಟಿ ರೂ. ಹೊಸ ಸಾಲ ಮಾಡಿದ್ದಾರೆ. ಆದರೆ ಈ ಸಾಲದಲ್ಲಿ ರಾಜ್ಯಕ್ಕೆ ಆರ್ಥಿಕ ಆದಾಯ ತರುವಂಥ ಅಭಿವೃದ್ಧಿ ಕೆಲಸಗಳಾಗದಿರುವುದು ಆರ್ಥಿಕ ವಿನಾಶಕ್ಕೆ ದಾರಿ ಮಾಡಿಕೊಡಲಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬೀದರ್ ಜಿಲ್ಲೆಗಂತೂ ಸಂಪೂರ್ಣ ನಿರ್ಲಕ್ಷ್ಯ ವಹಿಸಲಾಗಿದೆ. ಬಿಎಸ್ಎಸ್‌ಕೆ ಪುನಶ್ಚೇತನಕ್ಕೆ ಅನುದಾನ ನೀಡಿಲ್ಲ. ಕೇಂದ್ರದಿಂದ ಅನುದಾನ ಮಂಜೂರಾದರೂ ಬೀದರ್-ಔರಾದ್-ನಾಂದೇಡ್ ರೈಲ್ವೆ ಲೈನ್, ಸಿಪೆಟ್ ಕಾಲೇಜು ನಿರ್ಮಾಣಕ್ಕೆ ರಾಜ್ಯ ಸರ್ಕಾರ ತನ್ನ ಪಾಲಿನ ಅನುದಾನ ಘೋಷಿಸಿಲ್ಲ. ಒಂದೇ ಕುಟುಂಬದಲ್ಲಿ ಅಧಿಕಾರ ಇರುವುದೇ ಜಿಲ್ಲೆ ಅಭಿವೃದ್ಧಿಗೆ ದೊಡ್ಡ ಶಾಪವಾಗಿದೆ. ರಾಜ್ಯದಿಂದ ಜಿಲ್ಲೆಗೆ ಅನುದಾನ ತರಲು ವಿಫಲರಾಗಿರುವ ಈಶ್ವರ ಖಂಡ್ರೆ ಯಾವ ಪುರುಷಾರ್ಥಕ್ಕೆ ಮಂತ್ರಿಯಾಗಿರಬೇಕು? ರಾಜೀನಾಮೆ ನೀಡಿ ಜಿಲ್ಲೆಯ ಜನರಿಗೆ ಉಪಕಾರ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

## ಸರ್ವರ ಏಳಿಗೆಗೆ ಸಮರ್ಪಿತ



ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿರುವ ದಾಖಲೆಯ 17ನೇ ಬಜೆಟ್ ಸರ್ವಸ್ಪರ್ಶಿಯಾಗಿದ್ದು, ಬಡವರು, ಮಧ್ಯಮ ವರ್ಗದವರ ಏಳಿಗೆಗೆ ಸಮರ್ಪಿತವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ. ಬಜೆಟ್‌ನಲ್ಲಿ ಮಾನವ ವನ್ಯಜೀವಿ ಸಂಘರ್ಷ ನಿಯಂತ್ರಿಸಲು 1500 ಕೋಟಿ ರೂ. ಘೋಷಿಸಿದ್ದು, ಈ ವರ್ಷ 269 ಕೋಟಿ ಮೀಸಲಿಟ್ಟಿರುವುದನ್ನು ಸ್ವಾಗತಾರ್ಹ. ಇದರೊಂದಿಗೆ ಈಗಾಗಲೇ ಗ್ರೇಟರ್ ಹೆಸರುಘಟ್ಟ ಸಂರಕ್ಷಿತ ಹುಲ್ಲುಗಾವಲು ಎಂದು ಘೋಷಿಸಿರುವ ಪ್ರದೇಶದ ಅಭಿವೃದ್ಧಿಗೆ ಕ್ರಮ, ಬೆಂಗಳೂರು ಮಹಾನಗರದಲ್ಲಿ ಶ್ವಾಸತಾಣ ಸಂರಕ್ಷಣೆ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬೆಂಗಳೂರು ಹೊರವಲಯದ ಬನ್ನೇರುಘಟ್ಟದಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ಚಿರತೆ ಪುನರ್ವಸತಿ ಕೇಂದ್ರ ಸ್ಥಾಪನೆ, 2026-27ರಲ್ಲಿ ಅರಣ್ಯ ಇಲಾಖೆಯ ವಿವಿಧ ವೃಂದದಲ್ಲಿ ಖಾಲಿ ಇರುವ ಸುಮಾರು 2,000 ಹುದ್ದೆ ಭರ್ತಿ ಕೂಡ ಇಲಾಖೆಯ ಸಮಗ್ರ ಕಾರ್ಯವೈಖರಿ ಸುಧಾರಣೆಗೆ ಚೈತನ್ಯತುಂಬಲಿದೆ ಎಂದು ತಿಳಿಸಿದ್ದಾರೆ. ರಾಜ್ಯದ ಜನರಿಗೆ ಶುದ್ಧ ಗಾಳಿಯ ಖಾತ್ರಿಗಾಗಿ ಕರ್ನಾಟಕದಾದ್ಯಂತ 15 ಹೊಸ ಪರಿವೇಷ್ಠಿಕ ನಿರಂತರ ವಾಯು ಗುಣಮಟ್ಟದ ಮಾಪನ ಕೇಂದ್ರಗಳನ್ನು ಸ್ಥಾಪಿಸುತ್ತಿರುವುದು ಅತ್ಯಂತ ಅಗತ್ಯ ಮತ್ತು ಮಹತ್ವದ ಹೆಜ್ಜೆಯಾಗಿದೆ. ಮಾಗಡಿಯ ಹುಲಿಕಲ್-ಕುದೂರು ಗ್ರಾಮದಲ್ಲಿ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಸ್ಮಾರಕ ನಿರ್ಮಿಸುತ್ತಿರುವುದು ಪರಿಸರ ಪ್ರೇಮಿಗಳಿಗೆ ಸ್ಫೂರ್ತಿಯ ತಾಣವಾಗಲಿದೆ. ಬಸವಕಲ್ಯಾಣದಲ್ಲಿ ಖಾಸಗಿ ವಚನ ವಿಶ್ವವಿದ್ಯಾಲಯ ಸ್ಥಾಪನೆಗೆ 25 ಎಕರೆ ಜಮೀನು, ನೂತನ ಅನುಭವ ಮಂಟಪ ಕಾಮಗಾರಿ ಪೂರ್ಣಗೊಳಿಸಿ ಪ್ರಸಕ್ತ ವರ್ಷವೇ ಲೋಕಾರ್ಪಣೆ ಸೇರಿ ಜಿಲ್ಲೆಯ ಅಭಿವೃದ್ಧಿಗೆ ಬಜೆಟ್‌ನಲ್ಲಿ ನಾನಾ ಯೋಜನೆ ಘೋಷಣೆ ಮಾಡಲಾಗಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

## ಬೀದರ್ ಜಿಲ್ಲೆಗೆ ಸಿಕ್ಕಿದ್ದೇನು?

- ಪಶುವೈದ್ಯರು ಮತ್ತು ಪಶುವೈದ್ಯಕೀಯ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ತಾಂತ್ರಿಕ ತರಬೇತಿ ನೀಡಲು ಬೀದರ್ ಹಾಗೂ ಬೆಂಗಳೂರಿನಲ್ಲಿ ಶ್ವಾನ ಸಂತಾನ ನಿಯಂತ್ರಣ ತರಬೇತಿ ಕೇಂದ್ರ ಸ್ಥಾಪನೆ
- ಬಸವಕಲ್ಯಾಣದಲ್ಲಿ ಖಾಸಗಿ ವಚನ ವಿಶ್ವವಿದ್ಯಾಲಯ ಸ್ಥಾಪನೆಗೆ 25 ಎಕರೆ ಜಮೀನು
- ಬೀದರ್‌ನ ಶ್ರೀ ನಾನಕ್ ಝೀರಾ ಸಾಹೇಬ್ ಗುರುದ್ವಾರದಲ್ಲಿ ಗ್ರಂಥಾಲಯ ಸ್ಥಾಪನೆ
- ಬೀದರ್, ರಾಯಚೂರು ಮತ್ತು ಹಾಸನ ಮಹಾನಗರ ಪಾಲಿಕೆಗಳಿಗೆ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ 2.0 ರಡಿ ತಲಾ 200 ಕೋಟಿ ರೂ.
- ಬೀದರ್ ಸೇರಿ ರಾಜ್ಯದ ಆರು ಕಡೆ ತಲಾ ನಾಲ್ಕು ಕೋಟಿ ರೂ. ವೆಚ್ಚದಲ್ಲಿ ಹೊಸ ತಾರಾಲಯ ಸ್ಥಾಪನೆ
- ಬೀದರ್ ಸೇರಿ ರಾಜ್ಯದ ಹತ್ತು ಸ್ಥಳಗಳಲ್ಲಿ ಕಾರ್ಮಿಕ ರಾಜ್ಯ ವಿಮಾ (ಇಎಸ್ಐ) ಚಿಕಿತ್ಸಾಲಯ ಉನ್ನತೀಕರಣ
- ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯಿಂದ ನಿರ್ಮಿಸುತ್ತಿರುವ ಅನುಭವ ಮಂಟಪ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಿ ಲೋಕಾರ್ಪಣೆ
- ಬೀದರ್‌ನಲ್ಲಿ 1000 ಬಂದಿಗಳ ಸಾಮರ್ಥ್ಯದ ಜಿಲ್ಲಾ ಕೇಂದ್ರ ಕಾರಾಗೃಹ ನಿರ್ಮಾಣ

### ಹಳೆಯ ಘೋಷಣೆಗಳು...

- ಹಿಂದಿನ ಯೋಜನೆಗಳನ್ನು ಕಾರ್ಯರೂಪಕ್ಕೆ ತರದ ಜನಪ್ರತಿನಿಧಿಗಳು

ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ ಹಿಂದಿನ ಅವಧಿ ಬಜೆಟ್‌ನಲ್ಲಿ ಮಾಡಿದ ಹಲವು ಮಹತ್ವದ ಯೋಜನೆ ಘೋಷಣೆಗಳು ಹಾಗೆಯೇ ಉಳಿದಿವೆ. ಕಾರಂಜಾ, ಚುಳಕಿನಾಲಾ ಯೋಜನೆ ಪೂರ್ಣಗೊಳಿಸುವ ಬಗ್ಗೆ ಮಾಡಿದ್ದ ವಾಗ್ದಾನ ಈಡೇರಿಲ್ಲ. ಬೀದರ್‌ನಲ್ಲಿ ಐಟಿ ಪಾರ್ಕ್ ಇನ್ಕ್ಯುಬೇಟರ್ ಸ್ಥಾಪನೆಗೆ ಪೂರ್ವಸಿದ್ಧತೆಗಳೇ ನಡೆದಿಲ್ಲ. ಆರು ವರ್ಷದ ಹಿಂದೆ ಘೋಷಿಸಿದ್ದ ಹುಮನಾಬಾದ್‌ನಲ್ಲಿ ಟ್ರಕ್ ಟರ್ಮಿನಲ್ ಸ್ಥಾಪನೆ ಅನುಷ್ಠಾನಕ್ಕೆ ಬಂದಿಲ್ಲ. ಜಿಲ್ಲೆಯನ್ನು ಮಿಲ್ಕ್ ಶೆಡ್ ಪ್ರದೇಶವಾಗಿ ಅಭಿವೃದ್ಧಿಪಡಿಸಿ ಮೂರು ವರ್ಷದಲ್ಲಿ ದಿನವೂ 8 ಲಕ್ಷ ಲೀಟರ್ ಹಾಲು ಉತ್ಪಾದಿಸುವ ಯೋಜನೆ ಘೋಷಿಸಿ ಏಳು ವರ್ಷವಾಗಿದೆ. ಆದರೆ ಈವರೆಗೆ ಒಂದು ಲಕ್ಷ ಲೀಟರ್ ಹಾಲು ಉತ್ಪನ್ನದ ಗುರಿಯೂ ತಲುಪಿಲ್ಲ! ಹಿಂದಿನ ಮೈತ್ರಿ ಸರ್ಕಾರದ ಬಜೆಟ್‌ನಲ್ಲಿ ಬೀದರ್‌ನಲ್ಲಿ ಕೃಷಿ ಉಪಕರಣ ತಯಾರಿಸಲು ಮುಂದೆ ಬರುವ ಕಂಪನಿಗಳಿಗೆ 2000 ಕೋಟಿ ಬಂಡವಾಳ ಹೂಡಿಕೆ ಪ್ರಸ್ತಾವನೆಯಲ್ಲೇ ಉಳಿದಿದೆ. ಹಿಂದಿನ ಪಟ್ಟಿಗಳನ್ನು ಅವಲೋಕಿಸಿದರೆ ಬಜೆಟ್ ಘೋಷಣೆಗಳೆಲ್ಲ ಅಕ್ಷರಶಃ ಹಳ್ಳ ಹಿಡಿದಿರುವುದು ಸ್ಪಷ್ಟ. ಬಜೆಟ್ ಘೋಷಣೆಗಳಿಗೆ ಜಿಲ್ಲೆಯ ಜನಪ್ರತಿನಿಧಿಗಳು, ಆಡಳಿತಾರೂಢ ಪಕ್ಷದವರು ಎಷ್ಟು ಮಹತ್ವ ನೀಡುತ್ತಿದ್ದಾರೆ? ಹೇಗೆ ಕೆಲಸ ಮಾಡುತ್ತಿದ್ದಾರೆ ಎಂಬುದಕ್ಕೆ ನನೆಗುದಿಗೆ ಬಿದ್ದಿರುವ ಈ ಯೋಜನೆಗಳ ಪಟ್ಟಿಯೇ ಕನ್ನಡಿಯಾಗಿದೆ.

## ಅರಿವು ಮೂಡಿಸಲು ಅರ್ಜಿ ಆಹ್ವಾನ

**ಬಸವಕಲ್ಯಾಣ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ಪ್ರತಿಬಂಧಕ ಅಧಿನಿಯಮ 1989ರಡಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಬಗ್ಗೆ ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ಮಾನ್ಯತೆ ಪಡೆದ ಬೀದಿ ನಾಟಕ, ವಿಚಾರಗೋಷ್ಠಿ, ಕೋಮು ಸೌಹಾರ್ದ ಕುರಿತು ಅರಿವು ಮೂಡಿಸಲು ಅರ್ಹ ಸಂಸ್ಥೆಯವರು ಮಾ.16ರೊಳಗೆ ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸುವಂತೆ ಸಹಾಯಕ ನಿರ್ದೇಶಕ ದಿಲೀಪಕುಮಾರ ಉತ್ತಮ ತಿಳಿಸಿದ್ದಾರೆ.

### ಶ್ರೀ ಗುರುಬಸವ ಪಟ್ಟದ್ದೇವರು ನುಡಿ | ಕರಕನಳ್ಳಿಯಲ್ಲಿ ಸಂಗೀತ ದರ್ಬಾರ್

# ಕಲಾವಿದರಿಗೆ ಪ್ರೋತ್ಸಾಹಿಸುವ ಅಗತ್ಯ



ಕರಕನಳ್ಳಿಯಲ್ಲಿ ಶ್ರೀ ಗುರು ಗಂಗಾಧರ ಬಕ್ಕಪ್ರಭುಗಳ ಜಾತ್ರೋತ್ಸವ ನಿಮಿತ್ತ ಗುರುವಾರ ಏರ್ಪಡಿಸಿದ್ದ ಸಂಗೀತ ದರ್ಬಾರ್ ಕಾರ್ಯಕ್ರಮದಲ್ಲಿ ಶ್ರೀ ಗುರುಬಸವ ಪಟ್ಟದ್ದೇವರು ಮಾತನಾಡಿದರು. ಶ್ರೀ ಗುರುಲಿಂಗ ಶಿವಾಚಾರ್ಯ, ಶ್ರೀ ಮರುಳರಾಧ್ಯ ಸ್ವಾಮೀಜಿ, ಶ್ರೀ ಶಿವಕುಮಾರ ಸ್ವಾಮೀಜಿ, ಶ್ರೀ ಶಿವಯೋಗಿ ಜಂಗಮಯ್ಯ ಸ್ವಾಮೀಜಿ, ಡಾ.ನೀತಾ ಶೈಲೇಂದ್ರ ಬೆಲ್ದಾಳೆ ಇತರರಿದ್ದರು.

■ ವಿಜಯವಾಣಿ ಸುದ್ದಿಜಾಲ ಚಿಟಗುಪ್ಪ

ದೈವಿಕ ಕಲೆಯಾಗಿರುವ ಸಂಗೀತದ ಮೂಲಕ ಮನಸ್ಸಿಗೆ ಶಾಂತಿ ನೀಡುವ ಕಲಾವಿದರಿಗೆ ಪ್ರೋತ್ಸಾಹಿಸುವ ಕಾರ್ಯ ನಿರಂತರ ನಡೆಯಬೇಕು ಎಂದು ಭಾಲ್ಕಿ ಹಿರೇಮಠ ಸಂಸ್ಥಾನದ ಶ್ರೀ ಗುರುಬಸವ ಪಟ್ಟದ್ದೇವರು ಹೇಳಿದರು.

ಶ್ರೀ ಗುರು ಗಂಗಾಧರ ಬಕ್ಕಪ್ರಭುಗಳ 212ನೇ ಜಾತ್ರೋತ್ಸವ ನಿಮಿತ್ತ ಕರಕನಳ್ಳಿ ಗ್ರಾಮದಲ್ಲಿ ಗುರುವಾರ ಏರ್ಪಡಿಸಿದ್ದ ಸಂಗೀತ ದರ್ಬಾರ್ ಕಾರ್ಯಕ್ರಮ ಉದ್ಘಾಟಿಸಿದ ಅವರು, ಒತ್ತಡದಲ್ಲಿ ಜೀವನ ಸಾಗಿಸುತ್ತಿರುವ ಮನುಷ್ಯರಿಗೆ ಸಂಗೀತ ನೆಮ್ಮದಿಯ ಭಾವ ಮೂಡಿಸುತ್ತದೆ. ಇಂತಹ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಸಮಾಜದಲ್ಲಿ ನೈತಿಕ ಮೌಲ್ಯ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ.ನೀತಾ ಶೈಲೇಂದ್ರ ಬೆಲ್ದಾಳೆ ಮಾತನಾಡಿ, ಶ್ರೀ ಗುರು ಗಂಗಾಧರ ಬಕ್ಕಪ್ರಭುಗಳ ಜಾತ್ರೋತ್ಸವ ಗ್ರಾಮಸ್ಥರ ಭಕ್ತಿ, ಸಂಸ್ಕೃತಿ ಮತ್ತು ಏಕತೆ ಪ್ರತೀಕವಾಗಿದೆ ಎಂದು ಹೇಳಿದರು.

ಚಾಂಗಲೇರಾ ಶ್ರೀ ಗುರುಲಿಂಗ ಶಿವಾಚಾರ್ಯ, ಶ್ರೀ ಮರುಳರಾಧ್ಯ ಸ್ವಾಮೀಜಿ, ನರನಾಳ ಶ್ರೀ ಶಿವಕುಮಾರ ಸ್ವಾಮೀಜಿ, ಶ್ರೀ ಶಿವಯೋಗಿ ಜಂಗಮಯ್ಯ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ಪಿಡಿಒ ರಾಜಕುಮಾರ ಪಂಚಾಳ, ಪ್ರಮುಖರಾದ ಅಸ್ಲಾಂಮಿಯಾ ಚಿಟಗುಪ್ಪ, ಶಿವಶರಣಪ್ಪ ವರಪುಲ, ನವಲಿಂಗ ಪಾಟೀಲ, ಗೋಪಾಲರೆಡ್ಡಿ ನಿರ್ಣಾ, ಶಿವಶಂಕರ ಮಾಲಿಪಾಟೀಲ, ಜಗನ್ನಾಥ ರೆಡ್ಡಿ ಮಟಾಟಿ, ಲಕ್ಷ್ಮೀಕಾಂತ ಕುಲಕರ್ಣಿ, ನಾಗಪ್ಪ ಮಕಾಜಿ, ಜಗನ್ನಾಥ ಗಾರಿ, ಪ್ರಭು ಘಾಟೊಳ್ಳಿ ಇತರರಿದ್ದರು.

ಕಲಾವಿದರು ಭಕ್ತಿಗೀತೆ, ಜನಪದ, ಭಾವಗೀತೆ ಹಾಗೂ ಭಜನೆಗಳನ್ನು ಹಾಡಿ ಭಕ್ತರನ್ನು ರಂಜಿಸಿದರು.

VIJAYAVANIDIGITAL




सेन्ट्रल बैंक ऑफ इंडिया
Central Bank of India
1911 से आपके लिए ''केंद्रित'' "CENTRAL" TO YOU SINCE 1911

**ಶಾಖೆ : ಹುಬ್ಬಳ್ಳಿ**

**ಸ್ಥಿರಾಸ್ತಿಯ ಮಾರಾಟಕ್ಕೆ ಮಾರಾಟದ ಸೂಚನೆ**

**ಸ್ಥಿರಾಸ್ತಿಗಳ ಇ-ಹರಾಜು ಮಾರಾಟ ಸೂಚನೆ. ಭದ್ರತೆಯ ಅಡಿಯಲ್ಲಿ ಮತ್ತು ಹಣಕಾಸು ಆಸ್ತಿಗಳ ಪುನರ್ನಿಮಾನ ಮತ್ತು ಭದ್ರತಾ ಬಡ್ಡಿ ಕಾಯ್ದೆ 2002(2002 ರ ಪ್ರಕಾರ 6 ವರೆಗೆ ಓದಿ) 2002 ರ ಸುರಕ್ಷತಾ ಆಸಕ್ತಿ(ಜಾರಿ) ನಿಯಮಗಳ ಅಡಿಯಲ್ಲಿ**

ಹಣಕಾಸು ಸ್ವತ್ತುಗಳ ಭದ್ರತೆ, ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಕಾಯ್ದೆ, 2002 (SARFAESI ACT) ಅಡಿ ಹಾಗೂ ಭದ್ರತಾ ಆಸಕ್ತಿ (ಜಾರಿ) ನಿಯಮ 2002ರ ನಿಯಮ 8(6)ರ ಅಡಿ ಇ-ಹರಾಜು ಮೂಲಕ ಕರೆಯಲಾದ ಸ್ಥಿರಾಸ್ತಿಗಳ ಮಾರಾಟದ ನೋಟಿಸ್.

ಸಾರ್ವಜನಿಕರಿಗೆ ಸಾಮೂಹಿಕವಾಗಿ ಹಾಗೂ ಸಾಲಗಾರರಿಗೆ ಹಾಗೂ ಜಾಮೀನುದಾರರಿಗೆ ಪ್ರತ್ಯೇಕವಾಗಿ ನೋಟಿಸ್ ಜಾರಿ ಮಾಡಿದ್ದು, ಈ ಮೂಲಕ ತಿಳಿಸುವುದೇನೆಂದರೆ, ಸುರಕ್ಷಿತ ಸಾಲಗಾರರಿಗೆ ಅಡಮಾನ ಮಾಡಲಾದ/ಅಧಿಕಾರ ನೀಡಲಾದ ಈ ಕೆಳಗೆ ವಿವರಿಸಿದ ಸ್ಥಿರಾಸ್ತಿಯನ್ನು ಸುರಕ್ಷಿತ ಸಾಲದಾತರಾದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕೃತ ಅಧಿಕಾರಿಗಳು ರಚನಾತ್ಮಕ/ಭೌತಿಕ ಸ್ವಾಧೀನಕ್ಕೆ ತೆಗೆದುಕೊಂಡಿದ್ದು, ಸ ಖಾಸಗಿ ಒಪ್ಪಂದದ ಪ್ರಕಾರ ಬ್ಯಾಂಕ್‌ಗೆ ಸಮ್ಮತವಾಗುವ ನಿಯಮಗಳ ಅನುಸಾರ **'ಎಲ್ಲಿದೆಯೋ ಹಾಗೆ'** ಮತ್ತು **'ಸ್ವತ್ತುಹೇಗಿದೆಯೋ ಹಾಗೆ'** ಹಾಗೂ **'ಏನಿದೆಯೋ ಇದ್ದ ಹಾಗೆ' ಸ್ಥಿತಿಯಲ್ಲಿ ಈ ಆಸ್ತಿಗಳು ಈ ಕೆಳಗೆ ನಿರ್ದಿಷ್ಟಪಡಿಸಿದ ದಿನಾಂಕ ಮತ್ತು ಸಮಯದಲ್ಲಿ ಮಾರಾಟಕ್ಕೆ ಲಭ್ಯವಿವೆ. ಈ ಆಸ್ತಿಗಳಿಗೆ ಮೀಸಲು ಬೆಲೆ ಮತ್ತು** ಠೇವಣಿ ಮಾಡಬೇಕಾದ ಇಎಂಡಿ ಮೊತ್ತದ ವಿವರಗಳನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ.

**ಶಾಖೆ:** ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಬೀದರ
**ಸಾಲಗಾರರ ಹೆಸರು ಮತ್ತು ವಿಳಾಸ: ವಿಲಮೆನ್ ಕಾಟ್‌ನ್ ಇಂಡಸ್ಟ್ರೀಸ್ (ಮಾಲೀಕರು ವಿಲ್‌ಸನ್ ಜೋಸೆಫ್)**
ಪ್ಲಾಟ್ ನಂ: 1 ಮತ್ತು 2
ಸರ್ವೆ ನಂ: 144/4, ಮಾಸಕಾಲ ಥಾಂಡ, ಸಂತಾಪುರ, ತಾ: ಓರಾದ(ಬಿ), ಜಿ: ಬೀದರ, ಕರ್ನಾಟಕ-585402
**ವಿಳಾಸ: 2**
ಶ್ರೀ ವಿಲಸನ್ ಜೋಸೆಫ್, ಕೇ/ಆಫ್ ವೀರಮ್ಮ ಮಂದಿರ ಪಕ್ಕದಲ್ಲಿ, ಬರಿದಶಶಿ ಗಾರ್ಡನ್, ಬೀದರ-585401
**ಬಾಕಿ: ಮೊತ್ತ:** ರೂ 39,99,863.00 (ರೂ ಮೂವತ್ತೊಂಬತ್ತು ಲಕ್ಷದ ತೊಂಬತ್ತೊಂಬತ್ತು ಸಾವಿರದ ಎಂಟು ನೂರ ಅರವತ್ತ್ಮೂರು ರೂಪಾಯಿಗಳು) ದಿನಾಂಕ 22-05-2015 ಮತ್ತು ಬಡ್ಡಿ, ವೆಚ್ಚ ಮತ್ತು 23-05-2015 ರಿಂದ ಅನ್ವಯವಾಗುವಂತೆ.
**ಸ್ಥಿರಾಸ್ತಿಯ ವಿವರಗಳು:**
ಪ್ಲಾಟ್ ನಂ 1 ಮತ್ತು 2, ಸರ್ವೆ ನಂ: 144/4, ಮಾಸಕಾಲ ಥಾಂಡ, ಸಂತಾಪುರ, ತಾ: ಓರಾದ(ಬಿ), ಜಿ: ಬೀದರ, ಕರ್ನಾಟಕ-585402 ಪ್ಲಾಟ್ ನಂ 1 ರ ವಿಸ್ತೀರ್ಣ: 1365 ಚ.ಮೀ, ಪ್ಲಾಟ್ ನಂ 2 ರ ವಿಸ್ತೀರ್ಣ: 2565 ಚ.ಮೀ, ಖುಲ್ಲಾ ಜಾಗ
**ಚಕಬಂದಿ:** ಪೂರ್ವ: 12.00 ಮೀ ರಸ್ತೆ, ಪಶ್ಚಿಮ: ಪ್ಲಾಟ್ ನಂ 03, ಉತ್ತರ:ಸರ್ವೆ ನಂ 144/3 ರ ಜಾಗ, ದಕ್ಷಿಣ: 12 ಮೀ ರಸ್ತೆ
**ಮೀಸಲು ಬೆಲೆ:** ರೂ 16,00,000/-, **ಇಎಮ್ ಡಿ ಮೊತ್ತ:** ರೂ 1,60,000/-, **ಬಿಡ್ ಹೆಚ್ಚಳ ಮೊತ್ತ:** ರೂ 50,000/-
**ಇ-ಹರಾಜಿನ ದಿನಾಂಕ ಮತ್ತು ಸಮಯ:** 25-03-2026, ಮಧ್ಯಾಹ್ನ 11.00 ರಿಂದ ಸಂಜೆ 5.00 ಗಂಟೆಯವರೆಗೆ

ಸಾರ್ವಜನಿಕರಿಗೆ ಸಾಮೂಹಿಕವಾಗಿ ಹಾಗೂ ಸಾಲಗಾರರಿಗೆ ಹಾಗೂ ಜಾಮೀನುದಾರರಿಗೆ ಪ್ರತ್ಯೇಕವಾಗಿ ನೋಟಿಸ್ ಜಾರಿ ಮಾಡಿದ್ದು, ಈ ಮೂಲಕ ತಿಳಿಸುವುದೇನೆಂದರೆ, ಸುರಕ್ಷಿತ ಸಾಲಗಾರರಿಗೆ ಅಡಮಾನ ಮಾಡಲಾದ/ಅಧಿಕಾರ ನೀಡಲಾದ ಈ ಕೆಳಗೆ ವಿವರಿಸಿದ ಸ್ಥಿರಾಸ್ತಿಯನ್ನು ಸುರಕ್ಷಿತ ಸಾಲದಾತರಾದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕೃತ ಅಧಿಕಾರಿಗಳು ರಚನಾತ್ಮಕ/ಭೌತಿಕ ಸ್ವಾಧೀನಕ್ಕೆ ತೆಗೆದುಕೊಂಡಿದ್ದು, ಸ ಖಾಸಗಿ ಒಪ್ಪಂದದ ಪ್ರಕಾರ ಬ್ಯಾಂಕ್‌ಗೆ ಸಮ್ಮತವಾಗುವ ನಿಯಮಗಳ ಅನುಸಾರ **'ಎಲ್ಲಿದೆಯೋ ಹಾಗೆ'** ಮತ್ತು **'ಸ್ವತ್ತುಹೇಗಿದೆಯೋ ಹಾಗೆ'** ಹಾಗೂ **'ಏನಿದೆಯೋ ಇದ್ದ ಹಾಗೆ' (ಪೀಠೋಪಕರಣಗಳು, ಫಿಕ್ಚರ್ಸ್, ಸ್ಟಾಕ್ಸ, ಹಾಗೂ ಇತರೆ ಚರಾಸ್ತಿಗಳನ್ನು ಹೊರತುಪಡಿಸಿ) ಸ್ಥಿತಿಯಲ್ಲಿ ಈ ಆಸ್ತಿಗಳನ್ನು ದಿನಾಂಕ 25-03-2026ರಂದು ಆನ್ ಲೈನ ವೆಬ್ ಪೋರ್ಟಲ್** https://BAANKNET.COM) ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾಗೆ **ಬರಬೇಕಾಗಿರುವ ಬಾಕಿ ಮೊತ್ತವನ್ನು ವಸೂಲಿ ಮಾಡಲು ಹರಾಜು ಮಾಡಲಾಗುವುದು**. ಇ-ಹರಾಜಿನ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು https://www.centralbankofindia.co.in ಅನ್ನು ನೋಡಿ.

2002 ರ ಭ್ರದ್ರತಾ ಹಿತಾಸಕ್ತಿ(ಜಾರಿ) ನಿಯಮಗಳ ನಿಯಮ 6(20 ಮತ್ತು 8(6) ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್‌ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ-ಹರಾಜು.

ಆಸಕ್ತಿ ಬಿಡ್‌ದಾರರು ಇ ಹರಾಜಿನಲ್ಲಿ ಭಾಗವಹಿಸಲು ವೆಬ್ ಪೋರ್ಟಲ್ https://baanknet.com/eauction-psb/bidder-registration ಮೂಲಕ ನೋಂದಾಯಿಸಿಕೊಂಡು ಯೂಸರ್ ಐಡಿ ಮತ್ತು ಪಾಸವರ್ಡ್ ಪಡೆಯಬೇಕು. ಇಹರಾಜಿನ ಪ್ರಕ್ರಿಯೆಯ ಬಗ್ಗೆ ತಿಳಿದುಕೊಳ್ಳಲು https://BAANKNET.COM) **ನೋಡಿ**. ಇ-ಹರಾಜಿನ ವಿವರವಾದ ನಿಯುವುಗಳು ವುತ್ತು ಷರತ್ತುಗಳಿಗಾಗಿ ದಯುವಿಟ್ಟು https://www.centralbankofindia.co.in ಅನ್ನು ನೋಡಿ.

ಯಶಸ್ವಿ ಬಿಡ್‌ದಾರರು ಬಿಡ್ ಮೊತ್ತದ 25% ಅನ್ನು (ಇಎಮ್‌ಡಿ ಮೊತ್ತವನ್ನು ಒಳಗೊಂಡಂತೆ) ಅದೇ ದಿನ ಅಥವಾ ಹರಾಜಿನ ಮರುದಿನ ಮಾವತಿಸಬೇಕು. ಯಶಸ್ವಿ ಬಿಡ್‌ದಾರರು ಹರಾಜಿನ ಮರಿದಿನದೊಳಗೆ ಬಿಡ್ ಮೊತ್ತದ 25% ಹಣವನ್ನು ಪಾವತಿಸಲು ವಿಫಲವಾದರರೆ ಇಎಮ್‌ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮಾರಾಟದ ದೃಢಿಕರಣದ 15 ದಿನಗಳಲ್ಲಿ ಸಂಪೂರ್ಣ ಬಿಡ್ಡ ಮೊತ್ತವನ್ನು ಪಾವತಿಸಬೇಕು. ನಿಗದಿತ ಅವಧಿಯೊಳಗೆ ಬಿಡ್ ಮೊತ್ತವನ್ನು ಪಾವತಿಸಲು ವಿಫಲವಾದರೆ ಈಗಾಗಲೇ ಪಾವತಿಸಿದ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮಾರಾಟ ಪ್ರಮಾಣಪತ್ರವನ್ನು ಬಿಡ್ ಸಲ್ಲಿಸಿದ ವ್ಯಕ್ತಿ/ಗಳ ಹೆಸರಿನಲ್ಲಿ ಮಾತ್ರ ನೀಡಲಾಗುವುದು, ಬೇರೆ ಯಾವುದೇ ವ್ಯಕ್ತಿ/ಗಳ ಹೆಸರಿನಲ್ಲಿ ಅಲ್ಲ. ಯಶಸ್ವಿ ಬಿಡ್ಡಾರರು ನೋಂದಣಿ ವೆಚ್ಚಗಳು/ ಮುದ್ರಾಂಕ ಶುಲ್ಕ ಅಥವಾ ಅನ್ವಯವಾಗುವ ಯಾಔಉದೇ ಇತರ ವೆಚ್ಚವನ್ನು ಭರಿಸುತ್ತಾರೆ.

ನಿಯಮಗಳು ಮತ್ತು ಷರತ್ತುಗಳು ಕಟ್ಟುನಿಟ್ಟಾಗಿ ಭದ್ರತಾ ಆಸಕ್ತಿಯ ನಿಯಮಗಳ (ಜಾರಿ) ನಿಯಮಗಳು, 2002ರ ನಿಬಂಧನೆಗಳ ಪ್ರಕಾರ ಇರಬೇಕು

**ಸರ್ಫೇಸಿ ಕಾಯ್ದೆ, 2002ರ ನಿಯಮ 8(6)ರ ಅಡಿಯಲ್ಲಿ 15 ದಿನಗಳ ಶಾಸನಬದ್ಧ ಮಾರಾಟದ ನೋಟಿಸ್**

ಸಾಲಗಾರ/ಖಾತರಿದಾರರು ಮೇಲೆ ತಿಳಿಸಿದ ಮೊತ್ತವನ್ನು ಇ-ಹರಾಜಿನ ದಿನಾಂಕದ ಮೊದಲು ನವೀಕೃತ ಬಡ್ಡಿ ಮತ್ತು ಪೂರಕ ವೆಚ್ಚಗಳೊಂದಿಗೆ ಪಾವತಿಸಲು ಸೂಚಿಸಲಾಗಿದೆ. ಇದರಲ್ಲಿ ವಿಫಲರಾದರೆ ಆಸ್ತಿಯನ್ನು ಹರಾಜು/ಮಾರಾಟ ಮಾಡಲಾಗುವುದು ಮತ್ತು ಇನ್ನಷ್ಟು ಮೊತ್ತವು ಬಾಕಿ ಉಳಿದಿದ್ದರೆ, ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸೂಲಿ ಮಾಡಲಾಗುವುದು.

**ದಿನಾಂಕ: 04-03-2026**
**ಸ್ಥಳ: ಬೀದರ**

**ಸಹಿ/- ಅಧಿಕೃತ ಅಧಿಕಾರಿಗಳು**
**ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ**